# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 654
2. ಮಾನ್ಯ ಸದಸ್ಯರ ಹೆಸರು : ಶ್ರೀ ಯು. ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 14/12/2020
4. ಉತ್ತರಿಸುವವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿರುವ ರಾಸಾಯನಿಕ ಕಾರ್ಖಾನೆಗಳ ಗೋದಾಮುಗಳ ಸಂಖ್ಯೆ ಎಷ್ಟು; ಈ ಪೈಕಿ ಅಕ್ರಮ ಗೋದಾಮುಗಳೆಷ್ಟು; | ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆಯಡಿಯಲ್ಲಿ 87 ರಾಸಾಯನಿಕ ಕಾರ್ಖಾನೆಗಳ ಗೋದಾಮುಗಳು ನೋಂದಣಿಯಾಗಿರುತ್ತದೆ. ಅಕ್ರಮ ಗೋದಾಮುಗಳ ಬಗ್ಗೆ ಈ ಇಲಾಖೆಯಲ್ಲಿ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. |
| ಆ) | ಇತ್ತೀಚೆಗೆ ಮೈಸೂರು ರಸ್ತೆಯಲ್ಲಿನ ರಾಸಾಯನಿಕ ಕಾರ್ಖಾನೆಯಲ್ಲಿನ ಅಗ್ನಿ ಸ್ಫೋಟದಿಂದ ಉಂಟಾದ ಹಾನಿಯ ಪ್ರಮಾಣ ಎಷ್ಟು; | ಮೈಸೂರು ರಸ್ತೆಯಲ್ಲಿನ ರಾಸಾಯನಿಕ ಗೋದಾಮು ಇಲಾಖೆಯ ಕಾರ್ಯವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಮಾಹಿತಿ ಲಭ್ಯವಿರುವುದಿಲ್ಲ. |
| ಇ) | ಈ ಸಂಬಂಧ ತನಿಖೆ ಯಾವ ಹಂತದಲ್ಲಿದೆ; ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು? | ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರ್ಮಿಕರ ಹಿತದೃಷ್ಟಿಯಿಂದ ಇಲಾಖೆಯಿಂದ ತೆಗೆದುಕೊಂಡ ಕ್ರಮದ ವಿವರಗಳು ಈ ಕೆಳಕಂಡಂತೆ ಇರುತ್ತದೆ:<br><br>**1.** ಅಗ್ನಿ ಸ್ಫೋಟ ಉಂಟಾದ ರಾಸಾಯನಿಕ ಗೋದಾಮುಗಳಾದ ಮೆ: ರೇಖಾ ಕೆಮಿಕಲ್ಸ್ ಕಾರ್ಪೋರೇಷನ್, ನಂ. 14, ಎ ಸ್ಟ್ರೀಟ್, 1ನೇ ಮೈನ್, ಕುವೆಂಪುನಗರ, ನ್ಯೂ ಗುಡ್ಡದಹಳ್ಳಿ, ಬೆಂಗಳೂರು-560 026 ಮತ್ತು ಮೆ: ರೇಖಾ ಕೆಮಿಕಲ್ಸ್ ಇಂಡಸ್ಟ್ರೀಸ್, ನಂ. 14, ಎ ಸ್ಟ್ರೀಟ್, 1ನೇ ಮೈನ್, ಕುವೆಂಪುನಗರ, ನ್ಯೂ ಗುಡ್ಡದಹಳ್ಳಿ, ಬೆಂಗಳೂರು-560026 ಈ ಸಂಸ್ಥೆಗಳ ಮಾಲೀಕರ ವಿರುದ್ಧ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯ್ದೆ 1961, ವೇತನ ಪಾವತಿ ಕಾಯ್ದೆ 1936 ಹಾಗೂ ಕನಿಷ್ಠ ವೇತನ ಕಾಯ್ದೆ 1948ರಡಿ ನೋಟೀಸ್ ಅನ್ನು ಜಾರಿ ಮಾಡಲಾಗಿದ್ದು ಈ ಕಾಯ್ದೆಯ ಉಲ್ಲಂಘನೆಗಳಿಗಾಗಿ ನಿಯಮಾನುಸಾರ ಕಾನೂನು ಕ್ರಮ ಜರುಗಿಸಲಾಗುತ್ತಿದೆ. |

| | | |
|---|---|---|
| | | 2. ಬೆಂಕಿ ಅಪಘಾತದಿಂದ ಶ್ರೀ ಬಿಜಯ ಸಬರ್ ಬಿನ್ ಮುಟಕ ಸಬರ್, ವಿಳಾಸ: ಸನಲೋಬಾ, ಜೀರಂಗ ಜೀರಂಗೋ, ಮೋಹನ ಗಜಪತಿ, ಒಡಿಸ್ಸಾ–761212, ಎಂಬ ಕಾರ್ಮಿಕನು ಮೃತಪಟ್ಟಿದ್ದು ಸಂಬಂಧಪಟ್ಟ ಸಂಸ್ಥೆಯ ಮಾಲೀಕರು ದಿನಾಂಕ:16–11–2020ರಂದು ರೂ.6,50,000/– ಪರಿಹಾರವನ್ನು ಪಾವತಿಸಿರುತ್ತಾರೆ. ಇದರಲ್ಲಿ ರೂ. 1,50,000/–ಗಳನ್ನು ನಗದಾಗಿ ಹಾಗೂ ರೂ. 5,00,000/–ಗಳನ್ನು ಕೆನರಾ ಬ್ಯಾಂಕ್ ಚೆಕ್ ಸಂಖ್ಯೆ 425332, ದಿನಾಂಕ: 16–11–2020ರ ಮೂಲಕ ಮೃತ ಕಾರ್ಮಿಕನ ಪತ್ನಿ ಶ್ರೀಮತಿ ಘುಲಮಾನಿ ಸಬರ್ ಇವರಿಗೆ ಪಾವತಿಸಿರುತ್ತಾರೆ.<br><br>3. ಆಪಾದಿತ ಮಾಲೀಕರಿಗೆ ಮೃತ ಪಟ್ಟ ಕಾರ್ಮಿಕರ ಅವಲಂಬಿತರ ಹೆಸರಿನಲ್ಲಿ ನೌಕರರ ಪರಿಹಾರ ಕಾಯ್ದೆ 1923ರಡಿ ನಿಯಮಾನುಸಾರ ಕೋರ್ಟ್ ಆಫ್ ಸ್ಮಾಲ್ ಕಾಸಸ್, ಸಿಟಿ ಸಿವಿಲ್ ಕೋರ್ಟ್ ಕಾಂಪ್ಲೆಕ್ಸ್, ಬೆಂಗಳೂರು, ಇಲ್ಲಿ ಪರಿಹಾರ ಮೊತ್ತವನ್ನು ಠೇವಣಿ ಇಡುವಂತೆ ತಿಳಿಸಲಾಗಿರುತ್ತದೆ. |

ಕಾಇ–ಕಾಬಾಸೇ/48/2020

(ಅರಬೈಲ್ ಶಿವರಾಂ ಹೆಬ್ಬಾರ್)
**ಕಾರ್ಮಿಕ ಮತ್ತು ಸಕ್ಕರೆ ಸಚಿವರು**